# ಅಧ್ಯಾತ್ಮ ಮತ್ತು ಆನಂದ

ಬ್ರಹ್ಮಚಾರಿ ಪವಿತ್ರಚೈತನ್ಯ



ಅನೇಕರು ಭಾವಿಸಿರುವಂತೆ ಧರ್ಮ, ಅಧ್ಯಾತ್ಮ, ಸಾಧನೆಗಳೆಂದರೆ ಅತ್ಯಂತ ಜಡವೂ ನೀರಸವೂ ಆದ ಕಾರ್ಯಗಳು. ಆದರೆ ಅದಕ್ಕೆ ವಿರುದ್ಧವಾಗಿ ಭಗವಂತನೆಡೆಗೆ ಸಾಗುವ ಮಾರ್ಗ ಅತ್ಯಂತ ಆನಂದ ದಾಯಕವೆಂದು ಶ್ರೀರಾಮಕೃಷ್ಣರು ಸಾರಿದರು. ಈ ವಿಷಯವನ್ನು ಇಲ್ಲಿ ಶಾಸ್ತ್ರ, ತತ್ತ್ವ ಹಾಗೂ ಪರಂಪರೆಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

'ಅಧ್ಯಾತ್ಮ' ಶಬ್ದವು ಕಿವಿಗೆ ಬಿದ್ದೊಡನೆ ಜನಸಾಮಾನ್ಯರ ಮನಸ್ಸಿನಲ್ಲಿ ಸಾಧಾರಣವಾಗಿ ಮೂಡಿಬರುವ ಆಲೋಚನೆಗಳು –'ಅಧ್ಯಾತ್ಮವು ಜೀವನೋಪಾಯದ ವೃತ್ತಿಯಿಂದ ನಿವೃತ್ತರಾದವರಿಗೆ ಅಥವಾ ಮುದಿ ವಯಸ್ಸಿನವರಿಗೆ ಮಾತ್ರ', 'ಆಧ್ಯಾತ್ಮಿಕ ಜೀವನವು ಆನಂದವೇ ಇಲ್ಲದ ಕಠಿಣವಾದ ಒಣ ತಪಸ್ಸೆ' ಇತ್ಯಾದಿ. 'ಆನಂದಕ್ಕೂ ಅಧ್ಯಾತ್ಮಕ್ಕೂ ಸಂಬಂಧವೇ ಇಲ್ಲ , ಅಧ್ಯಾತ್ಮದಿಂದ ಜೀವನದಲ್ಲಿ ಸವಿಯಬಹುದಾದ ಸ್ವಾದ ತಪ್ಪಿ ಹೋಗುತ್ತದೆ' ಎನ್ನುವುದು ಬಹುಜನರ ಮತ. ಇದು ಸತ್ಯವೋ ಮಿಥ್ಯವೋ ಎಂಬುದನ್ನು ವಿಚಾರದ ಮೂಲಕ ತಿಳಿಯಲು ಯಥಾಮತಿ ಪ್ರಯತ್ನಿಸೋಣ. ಅಧ್ಯಾತ್ಮಕ್ಕೂ ಆನಂದಕ್ಕೂ ಇರುವ ಸಂಬಂಧವನ್ನು ಅರಿಯೋಣ.

### ಅಧ್ಯಾತ್ಮವೆಂದರೇನು?

'ಅಧ್ಯಾತ್ಮ' ಶಬ್ದಕ್ಕೆ ವ್ಯುತ್ಪತ್ತಿಯ ಅನುಸಾರ 'ಆತ್ಮವನ್ನು ಆಧರಿಸಿದ್ದು' ಎನ್ನುವ ಅರ್ಥ ಬರುತ್ತದೆ. ಸರಳವಾಗಿ ಅರ್ಥೈಸುವುದಾದರೆ ಆತ್ಮಕ್ಕೆ ಸಂಬಂಧಪಟ್ಟಿದ್ದು ಎನ್ನಬಹುದು. ಗೀತಾಚಾರ್ಯನಾದ ಶ್ರೀಕೃಷ್ಣನು ಅಧ್ಯಾತ್ಮವೆಂದರೆ,

**ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।**

*(ಭಗವದ್ಗೀತೆ ೮.೩)*

ಅಂದರೆ, 'ಅಕ್ಷರವಾದ ಪರಮಾತ್ಮನೇ ಪರಬ್ರಹ್ಮವು. ಅದೇ ಪರಬ್ರಹ್ಮವು ಒಂದು ಜೀವಕೋಶವುಳ್ಳ ಸ್ತಂಬದಿಂದ (amoeba) ಹಿಡಿದು ಸೃಷ್ಟಿಕರ್ತನಾದ ಹಿರಣ್ಯಗರ್ಭನವರೆಗೂ ಸಂಸಾರದಲ್ಲಿರುವ ಎಲ್ಲ ಜೀವಿಗಳಲ್ಲಿ ಪ್ರತ್ಯಗಾತ್ಮನಾಗಿ ಇರುತ್ತದೆ. ಈ ಇರುವಿಕೆಯೇ ಅಧ್ಯಾತ್ಮವು' ಎನ್ನುತ್ತಾನೆ.

ಆತ್ಮದ ಆಧಾರವಾಗಿರುವುದು ಸರ್ವಾತೀತವೂ ಸರ್ವಗತವಾದ ಪರಬ್ರಹ್ಮವೇ. ಈ ಪರಬ್ರಹ್ಮವು ಇಡೀ ಬ್ರಹ್ಮಾಂಡದ, ಸೃಷ್ಟಿಯಾದ ಪ್ರಪಂಚದ ಆಧಾರವೂ ಹೌದು. ಅನಂತವಾದ ಕಾರಣ ಸೀಮಿತ ವಾದ ಮನಸ್ಸು ಮತ್ತು ಮಾತಿಗೆ ಮೀರಿದ್ದು. ಪರಬ್ರಹ್ಮದ ಸ್ವರೂಪವನ್ನು ತಮ್ಮ ಅಂತರಂಗದಲ್ಲಿ ಅರಿತ ಋಷಿಗಳು ಅದನ್ನು 'ಅಖಂಡಸಚ್ಚಿದಾನಂದ' ಎಂದಿದ್ದಾರೆ. ಸಚ್ಚಿದಾನಂದವು ಸತ್, ಚಿತ್ ಮತ್ತು ಆನಂದ ಎಂಬ ಮೂರು ಪದಗಳ ಕೂಡುವಿಕೆಯಿಂದ ಆಗಿದೆ. **ಸತ್** ಎಂದರೇ ಅಸ್ತಿತ್ವ ಅಥವಾ ಇರುವಿಕೆಯೇ ಆಗಿದೆ. ಪರಬ್ರಹ್ಮವೆಂಬುದು ಇದೆ ಎಂದರೆ ಅದು ಒಂದು ವಸ್ತು ಅಥವಾ ವ್ಯಕ್ತಿಯಾಗಿ ಇದೆ ಎಂದಾಗುವುದರಿಂದ ಸರಿಹೊಂದುವುದಿಲ್ಲ. ಯಾಕೆಂದರೆ ಅದು ಅಸ್ತಿತ್ವವೇ ಆಗಿದೆ. ಹಾಗೆಯೇ **ಚಿತ್** ಎಂದರೆ ಜ್ಞಾನ ಅಥವಾ ಚೈತನ್ಯವೇ ಆಗಿದೆ. ಪರಬ್ರಹ್ಮವು ಚೈತನ್ಯ ಸ್ವರೂಪವೇ ಆಗಿ ಸೃಷ್ಟಿಯಾದ ಜೀವಿಗಳಲ್ಲಿ ಪ್ರತ್ಯಗಾತ್ಮವಾಗಿ ಇರುವುದರಿಂದ ಸೃಷ್ಟಿಯಾದ ಎಲ್ಲಾ ಜೀವಿಗಳು ಚೈತನ್ಯದಿಂದ ಕೂಡಿದೆ. ಅಂತೆಯೇ ಅನಂತವಾದ ನಿಷ್ಕಲ್ಮಷವಾದ **ಆನಂದವೂ** ಇದರ ಸ್ವರೂಪವಾಗಿದೆ. 'ಸಚ್ಚಿದಾನಂದ'ವೆಂಬುದು ಪರಬ್ರಹ್ಮನ ಸ್ವರೂಪ ಲಕ್ಷಣವೆನಿಸಿಕೊಳ್ಳುತ್ತದೆ.

ಇದೇ ಪರಬ್ರಹ್ಮವು **'ಬಹು ಸ್ಯಾಂ ಪ್ರಜಾಯೇಯ'**(ನಾನು ಒಬ್ಬನೇ ಇದ್ದೇನೆ, ಬಹುವಾಗಿ ಹುಟ್ಟುತ್ತೇನೆ, ಪ್ರಕಟವಾಗುತ್ತೇನೆ)

ಎಂದು ಸಂಕಲ್ಪ ಮಾಡಿ ನಾಮ-ರೂಪಾತ್ಮಕವಾದ ಬ್ರಹ್ಮಾಂಡ ವಾಯಿತು. ಸಾಮಾನ್ಯರಾದ ನಾವು ಪರಬ್ರಹ್ಮನನ್ನು ಜಗದ್ರೂಪ ವಾಗಿ ಕಾಣುತ್ತಿದ್ದೇವೆ. ನಾಮರೂಪಾತ್ಮಕವಾಗಿ ಮಾರ್ಪಟ್ಟಂತಿ ರುವ ಪರಬ್ರಹ್ಮನ ಈ ಲಕ್ಷಣವನ್ನು 'ತಟಸ್ಥಲಕ್ಷಣ' ಎಂದು ಕರೆದಿ ದ್ದಾರೆ ದಾರ್ಶನಿಕರು.

ಪರಬ್ರಹ್ಮವೇ ಆಧಾರವಾಗಿರುವ ಪ್ರತ್ಯಗಾತ್ಮನ ಅಸ್ತಿತ್ವವು ಪರಬ್ರಹ್ಮನಲ್ಲೇ ನೆಲೆನಿಂತು ಅದರಲ್ಲೇ ಲೀನವಾಗುತ್ತದೆ. ಇದೇ ಪ್ರತಿಯೊಂದು ಜೀವಿಯ ನಿಜವಾದ ನೆಲೆ, ಸ್ವರೂಪವಾಗಿದೆ. ಮನುಷ್ಯಶರೀರಧಾರಣೆ ಮಾಡಿದ, ಜನ್ಮತಾಳಿದ ಪ್ರತಿಯೊಬ್ಬರ ಗುರಿಯು ತಮ್ಮ ಅಂತರಾಳದಲ್ಲಿರುವ ಈ ನೈಜ ಅಸ್ತಿತ್ವವನ್ನು ಸಾಕ್ಷಾತ್ಕರಿಸಿಕೊಂಡು ಅದನ್ನು ಜೀವನದ ಪ್ರತಿಕ್ಷಣದಲ್ಲಿ ವ್ಯಕ್ತ ಪಡಿಸುವುದು ಎಂದು ಸ್ವಾಮಿ ವಿವೇಕಾನಂದರು ಬೋಧಿಸಿದ್ದಾರೆ. ಇದೇ ಅಧ್ಯಾತ್ಮದ ತಿರುಳು. ಆತ್ಮನ ಅಥವಾ ಪರಬ್ರಹ್ಮನ ಸ್ವರೂಪ ಮತ್ತು ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಉಪಾಯವನ್ನು ವೇದಗಳ ಶಿರಸ್ಸಾದ ವೇದಾಂತವೂ ಬೋಧಿಸುತ್ತದೆ. ಇದನ್ನೇ ಎಲ್ಲ ಧರ್ಮ ಗಳ ಪ್ರವರ್ತಕರೂ, ಸಂತರೂ, ಮಹಾತ್ಮರೂ ತಮ್ಮ ಜೀವನದ ಮೂಲಕ ಬೇರೆ ಬೇರೆ ಭಾಷೆಗಳಲ್ಲಿ , ವಿವಿಧ ದೃಷ್ಟಾಂತಗಳ ಮೂಲಕ ಬೋಧಿಸಿದ್ದಾರೆ.

## ಆನಂದದ ವ್ಯಾಖ್ಯೆ

ಆನಂದದ ಅರ್ಥವನ್ನು ಯಾರಿಗಾದರೂ ವಿವರಿಸಬೇಕೆ? ನಮಗೆಲ್ಲರಿಗೂ ಆನಂದದ ಪರಿಚಯವಿದ್ದದ್ದೇ. ನಮಗೆ ಇಷ್ಟ ವಾದ ತಿಂಡಿಯೋ, ವಸ್ತುವೋ, ವ್ಯಕ್ತಿಯೋ ಸಿಕ್ಕಿದರೆ ಹರ್ಷಿಸಿ ಹಿಗ್ಗುತ್ತೇವೆ. ಆನಂದವನ್ನು ಅನುಭವಿಸಿದ್ದರೂ ದುಃಖದ ಅನು ಭವವೂ ಆಗಿರುವುದರಿಂದ, ನಾವೆಲ್ಲರೂ ದುಃಖವನ್ನು ನಿವಾರಿಸಿ ಆನಂದವನ್ನು ಮಾತ್ರ ಕೊಡುವ ಮಾರ್ಗವನ್ನು ಹುಡುಕುತ್ತಿದ್ದೇವೆ ಅಲ್ಲವೆ? ಆನಂದದ ಮೂಲವನ್ನು ಚೆನ್ನಾಗಿ ವಿಶ್ಲೇಷಿಸಿ, ವಿವೇಚಿಸಿ ದಾಗ ಆನಂದದ ಸ್ವರೂಪವೇನು ಎಂದು ತಿಳಿಯಬಹುದು.

ಶ್ರೀರಾಮಕೃಷ್ಣರು ಆನಂದವನ್ನು ಮೂರು ರೀತಿಯಾಗಿ ವಿಂಗಡಿಸಿ ಹೀಗೆ ಹೇಳುತ್ತಾರೆ. ಪ್ರಾಪಂಚಿಕ ವಸ್ತುವಿಷಯಗಳಿಂದ ಸಿಗುವ ಆನಂದವನ್ನು **ವಿಷಯಾನಂದ**ವೆನ್ನುತ್ತಾರೆ. ವಿಷಯವಸ್ತು ಗಳಿಂದ ಉಂಟಾದ ಆನಂದವು ಮನಸ್ಸಿನ ಮಾರ್ಪಾಟು, ಪ್ರತಿ ಕ್ರಿಯೆಯಷ್ಟೆ. ಪ್ರಪಂಚದ ಆನಂದವು ಅನಿತ್ಯ ಮತ್ತು ಕ್ಷಣಿಕ ಎಂಬ ವಿವೇಕ ಜಾಗೃತವಾದ ನಂತರ ಜೀವಿಯು ಪರಮಾತ್ಮ ನನ್ನು ಭಜಿಸಲು ಆರಂಭಿಸುತ್ತದೆ. ಆ ರೀತಿಯ ಭಜನೆಯಿಂದ ಉಂಟಾದ ಆನಂದವನ್ನು **ಭಜನಾನಂದ**ವೆಂದು ಕರೆದಿದ್ದಾರೆ. ಭಜನಾನಂದದಿಂದ ಶುದ್ಧವಾದ, ನಿತಾಂತವಾಗಿ ನಿಷ್ಕಲ್ಮಷವಾದ ಮನಸ್ಸು, ದ್ವಂದ್ವಗಳಿಲ್ಲದ, ಜ್ಞಾನ ಜ್ಞಾತೃ ಮತ್ತು ಜ್ಞೇಯ ಎಂಬ ತ್ರಿಪುಟಿಭೇದವಿಲ್ಲದ, ಸ್ವಸ್ವರೂಪವಾದ ಅನಂತವಾದ ಆನಂದ ದಲ್ಲಿ ಲೀನವಾಗುವುದನ್ನು **ಬ್ರಹ್ಮಾನಂದ**ವೆಂದು ತಿಳಿಸಿದ್ದಾರೆ.

ಆನಂದದ ವಿಶ್ಲೇಷಣೆಯನ್ನು ಕಥೆಯೊಂದು ಚೆನ್ನಾಗಿ ಮನ ದಟ್ಟು ಮಾಡುತ್ತದೆ. ದೊಡ್ಡದಾದ ರಾಜ್ಯವೊಂದನ್ನು ಒಬ್ಬ ರಾಜನು ಆಳುತ್ತಿದ್ದನು. ಆ ರಾಜ್ಯದಲ್ಲಿ ಎಲ್ಲಾ ಪ್ರಜೆಗಳು ಧರ್ಮಿಷ್ಠ ರಾಗಿದ್ದರು ಮತ್ತು ಅಲ್ಲಿ ಸುಭಿಕ್ಷವಿತ್ತು. ಎಲ್ಲರೂ ಸುಖವಾಗಿ ದ್ದರೂ ರಾಜನು ಮಾತ್ರ ಯಾವುದೋ ಅತೃಪ್ತಿಯಿಂದ ಬಳಲು ತ್ತಿದ್ದ. ಅದನ್ನು ಗುಣಪಡಿಸಲು ಯಾರಿಗೂ ಉಪಾಯ ಹೊಳೆಯ ಲಿಲ್ಲ. ಆಸ್ಥಾನದ ಪಂಡಿತನೊಬ್ಬ, ''ನೀವು ಕೇವಲ ಸುಖವನ್ನು ಮಾತ್ರ ಅನುಭವಿಸುತ್ತಿರುವ ವ್ಯಕ್ತಿಯ ನಿಲುವಂಗಿಯನ್ನು ತೊಟ್ಟರೆ ನಿಮ್ಮ ಈ ಅತೃಪ್ತಿ ದೂರವಾಗುವುದು'' ಎಂದನು. ಆಗ ರಾಜನು, ಕೇವಲ ಸುಖಿಯಾದ ವ್ಯಕ್ತಿಯು ತನ್ನ ನಿಲುವಂಗಿಯನ್ನು ಕೊಟ್ಟರೆ ಅಪಾರ ಮೌಲ್ಯದ ಬಹುಮಾನವನ್ನು ಕೊಡುವುದಾಗಿ ಘೋಷಿಸು ತ್ತಾನೆ. ಯಾರೊಬ್ಬರೂ ಮುಂದೆ ಬರದಿದ್ದುದನ್ನು ಕಂಡು ರಾಜನು ತನ್ನ ಭಟರನ್ನು ರಾಜ್ಯದ ಮೂಲೆ ಮೂಲೆಗೆ ಕಳುಹಿಸಿ ಯಾರಾ ದರೂ ದುಃಖವಿಲ್ಲದೆ, ಸುಖವನ್ನು ಮಾತ್ರ ಅನುಭವಿಸುತ್ತಿರು ವವರಿದ್ದರೆ ಅವರ ನಿಲುವಂಗಿಯನ್ನು ತರಲು ಆದೇಶಿಸುತ್ತಾನೆ. ಇತ್ತ ಭಟರು ಅಲೆದಲೆದು ಹುಡುಕಿ ಕಡೆಗೆ ಯಾವುದೋ ಕುಗ್ರಾಮದಲ್ಲಿ ಸದಾ ಸರ್ವದಾ ಆನಂದದಲ್ಲಿದ್ದಂತಹ ಒಬ್ಬ ಎತ್ತಿನ ಗಾಡಿಯವನ ಬಳಿ ಬರುತ್ತಾರೆ. ಆಶ್ಚರ್ಯದ ಸಂಗತಿ ಯೆಂದರೆ ಅವನು ನಿಲುವಂಗಿಯನ್ನೇ ತೊಟ್ಟಿರುವುದಿಲ್ಲ. ರಾಜ ಭಟರು ತಾವು ಕಂಡದ್ದನ್ನು ರಾಜನ ಬಳಿ ತಿಳಿಸಲು, ರಾಜನು ಗಾಡಿಯವನನ್ನೇ ಕರೆತರಲು ಹೇಳುತ್ತಾನೆ. ಗಾಡಿಯವನು, ''ನಾನೇಕೆ ರಾಜನ ಬಳಿ ಬರಬೇಕು? ರಾಜನಿಗೇನು ನನ್ನ ಎತ್ತಿನ ಗಾಡಿಯ ಆವಶ್ಯಕತೆಯಿದೆಯೇನು?'' ಎಂದನು. ಆಗ ಭಟರು, ''ರಾಜನು ನಿನಗೆ ಪಾರಿತೋಷಕ ಕೊಡುತ್ತಾನೆ. ಅದರಿಂದ ನೀನು ಮತ್ತಷ್ಟು ಸುಖಿಯಾಗುವೆ. ನಿಲುವಂಗಿಯನ್ನು ಖರೀದಿಸ ಬಹುದು'' ಎಂದರು. ಅವನು, ''ನಾನು ನಿಲುವಂಗಿ ತೊಟ್ಟು ಕೊಳ್ಳದೇ ಸುಖಿಯಾಗಿದ್ದೇನೆ. ಹಣದಿಂದ ವಸ್ತುಗಳನ್ನು ಖರೀ ದಿಸಬಹುದು. ಆದರೆ ಅದರಿಂದ ಸುಖವನ್ನು ಕೊಂಡುಕೊಳ್ಳ ಬಹುದೇನು? ರಾಜನು ಬೇಕಾದರೆ ನನ್ನನ್ನು ಬಂದು ಕಾಣಲಿ'' ಎಂದು ಹೇಳಿ ಅವರನ್ನು ಕಳುಹಿಸಿಬಿಟ್ಟನು. ಇದನ್ನು ಕೇಳಿ ರಾಜನು ಆಭರಣ, ಅಶ್ವ, ಗಜ, ಪರಿಚಾರಿಕೆಯರು ಇತ್ಯಾದಿ ಪಾರಿ ತೋಷಕಗಳನ್ನು ತೆಗೆದುಕೊಂಡು ಗಾಡಿಯವನ ಬಳಿ ಬರುತ್ತಾನೆ. ಗಾಡಿಯವನು ಅದನ್ನೆಲ್ಲಾ ಕಣ್ಣೆತ್ತಿಯೂ ನೋಡದೆ ತಿರಸ್ಕರಿಸು ತ್ತಾನೆ. ರಾಜ ಅದು ಸಾಕಾಗಲಿಲ್ಲವೇನೋ ಎಂದು ಕೊಂಡು ಮತ್ತೂ ಹೆಚ್ಚು ಪಾರಿತೋಷಕಗಳನ್ನು ತಂದು ಅವನ ಮುಂದಿಡು ತ್ತಾನೆ. ಗಾಡಿಯವನು ರಾಜನಿಗೆ, ''ಯಾರು ಸ್ವಯಂ ಸುಖದ ಗಣಿಯೋ ಅವನಿಗೆ ಸುಖದ ಲಾಲಸೆ ತೋರಿಸುವವನು ಮೂರ್ಖನೇ ಸರಿ'' ಎಂದು ಬೈದುಬಿಡುತ್ತಾನೆ.

ಬುದ್ಧಿಯರಿತ ರಾಜನು ತನ್ನ ವೇಷಭೂಷಣಗಳನ್ನೆಲ್ಲಾ ತೆಗೆ ದಿಟ್ಟು ವಿನೀತನಾಗಿ ಇವನಲ್ಲಿ ಶಿಷ್ಯನಂತೆ ಬಂದು ನಮಿಸುತ್ತಾನೆ.

ರಾಜನು ಗಾಡಿಯವನ ಸೇವೆ ಮಾಡಿ ಅವನಲ್ಲಿ ಅಸೀಮ ಆನಂದದ ರಹಸ್ಯವನ್ನು ತಿಳಿಸಲು ಕೇಳಿಕೊಳ್ಳುತ್ತಾನೆ.

ಗಾಡಿಯವನು ಹೀಗೆ ಉಪದೇಶಿಸುತ್ತಾನೆ : ''ರಾಜನೆ, ನಾವು ಇಷ್ಟಪಟ್ಟ ವಸ್ತು ಅಥವಾ ವ್ಯಕ್ತಿ ನಮ್ಮ ಸಮಕ್ಷಕ್ಕೆ ಅಥವಾ ಕಲ್ಪನೆಗೆ ಬಂದರೆ ಆಗುವ ಆನಂದಕ್ಕೆ 'ಪ್ರಿಯ' ಎಂದು ಶಾಸ್ತ್ರವು ಕರೆಯುತ್ತದೆ. ಆ ವಸ್ತುವನ್ನು ಪಡೆದಾಗ ಆಗುವ ಆನಂದಕ್ಕೆ 'ಮೋದ' ಎಂದು ಹೆಸರು. ಆ ವಸ್ತುವನ್ನು ಉಪಯೋಗಿಸಿದಾಗ ಉಂಟಾಗುವ ಆನಂದಕ್ಕೆ 'ಪ್ರಮೋದ' ಎನ್ನುತ್ತಾರೆ. ಆ ವಸ್ತುವು ನಶಿಸಿಹೋದಾಗ ಅಥವಾ ಕಳೆದುಹೋದಾಗ ಆನಂದವೂ ನಷ್ಟವಾಗುತ್ತದೆ. ಆದ್ದರಿಂದ ವಸ್ತು ಅಥವಾ ವ್ಯಕ್ತಿಯಿಂದ ಪಡೆಯುವ ಆನಂದ ಶಾಶ್ವತವಾದುದ್ದಲ್ಲ. ವಸ್ತು ಅಥವಾ ವ್ಯಕ್ತಿಯಿಂದ ಉಂಟಾಗುವ ಆನಂದವು ಕ್ಷಣಿಕ ಹಾಗೂಅನಿತ್ಯವಾಗಿರುತ್ತದೆ.

**ತಸ್ಮಾದ್ವಾ ಏತಸ್ಮಾದ್ ವಿಜ್ಞಾನಮಯಾತ್ । ಅನ್ಯೋಽನ್ತರ ಆತ್ಮಾನಂದಮಯಃ । ತಸ್ಯ ಪ್ರಿಯಮೇವ ಶಿರಃ । ಮೋದೋ ದಕ್ಷಿಣಃ ಪಕ್ಷಃ । ಪ್ರಮೋದ ಉತ್ತರಃ ಪಕ್ಷಃ । ಆನಂದ ಆತ್ಮಾ । ಬ್ರಹ್ಮ ಪುಚ್ಛಂ ಪ್ರತಿಷ್ಠಾ ॥** *(ತೈತ್ತಿರೀಯೋಪನಿಷತ್ತು ೨.೫.೧)*

''ಸುಖದ ಮೂಲಕಾರಣ ಆತ್ಮ. ಯಾರು ಆತ್ಮನನ್ನು ಅನಂತ ಸುಖದ ಸ್ವರೂಪ ಎಂದು ಅರಿಯುತ್ತಾರೋ, ಅವರು ಸುಖಕ್ಕಾಗಿ ಹೊರಪ್ರಪಂಚದ ವಸ್ತು-ವ್ಯಕ್ತಿಗಳ ಹಿಂದೆ ಬೀಳುವುದಿಲ್ಲ. ಆದರೆ ಮಾಯೆಯ ಅಜ್ಞಾನದ ಆವರಣದಿಂದಾಗಿ ತಮ್ಮದೇ ಸ್ವರೂಪವಾದ ಅನಂತಸುಖವನ್ನು ಬಾಹ್ಯಪ್ರಪಂಚದಲ್ಲಿ ಹುಡುಕುತ್ತಾರೆ.

**ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ ।**
**ತಸ್ಮಾತ್ ಪರಾಙ್-ಪಶ್ಯತಿ ನಾಂತರಾತ್ಮನ್।**
**ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್**
**ಆವೃತ್ತಚಕ್ಷುಃ ಅಮೃತತ್ವಮಿಚ್ಛನ್॥**

*(ಕಠೋಪನಿಷತ್ತು ೨.೧.೧)*

''ಇದರಿಂದಲೇ ನಿನ್ನಂತಹ ದೊಡ್ಡ ರಾಜರಿಗೂ ಸುಖವು ಬೇರೊಂದು ವ್ಯಕ್ತಿಯ ಅಥವಾ ಹೊರವಸ್ತುವಿನ ಮೇಲೆ ಆಧರಿಸಿರುವಂತೆ ತೋರುತ್ತದೆ. ಬಲವಾದ ಮಾಯೆಯ ಬಲೆಯನ್ನು ತಪ್ಪಿಸಿಕೊಳ್ಳಲು ತೈತ್ತಿರೀಯೋಪನಿಷತ್ತು ಬ್ರಹ್ಮಾನಂದದ ಮಹಿಮೆಯನ್ನು ವಿವರಿಸಿ ಮನಸ್ಸನ್ನು ಬ್ರಹ್ಮಾನಂದದ ಕಡೆಗೆ ಸೆಳೆಯುತ್ತದೆ. ನಿನ್ನಂತಹ ಆಶಿಷ್ಠ, ದೃಢಿಷ್ಠ ಮತ್ತು ಬಲಿಷ್ಠನಾದ ಯೌವನದಿಂದ ಕೂಡಿದ ರಾಜನಿಗೆ ಇಡೀ ಭೂಮಂಡಲವು ಧನದಿಂದ ಕೂಡಿದಾಗ ಆಗುವ ಆನಂದವು ಒಂದು ಮಾನುಷ ಆನಂದವಾದರೆ ಅದರ ೧೦$^{೨೦}$=೧೦,೦೦,೦೦,೦೦,೦೦,೦೦,೦೦, ೦೦, ೦೦,೦೦೦ ಪಟ್ಟು ಬ್ರಹ್ಮಾನಂದವೆಂದು ಘೋಷಿಸುತ್ತದೆ. ಹೀಗಿರುವಾಗ ಮನುಷ್ಯನು ಕ್ಷುಲ್ಲಕವಾದ ವಿಷಯವಸ್ತುಗಳಿಂದ ದೊರಕುವ ಆನಂದದ ಹಿಂದೆ ಬಿದ್ದು ಅದಕ್ಕೆ ಅಂಟಿಕೊಂಡು ನಶಿಸುತ್ತಾನೆ.'' ಈ ಉಪದೇಶಗಳನ್ನು ಕೇಳಿದ ರಾಜನಿಗೆ ಆನಂದದ ತತ್ತ್ವದ ಅರಿವಾಗಿ ಗಾಡಿಯವನನ್ನು ಪುನಃ ಪುನಃ ನಮಸ್ಕರಿಸಿ, ಸತ್ಕರಿಸಿ ಬೀಳ್ಕೊಳ್ಳುತ್ತಾನೆ.

ವೇದಾಂತದ ಪ್ರಕರಣ ಗ್ರಂಥವೊಂದು ಆನಂದದ ವ್ಯಾಖ್ಯಾನಕ್ಕೆ ಮತ್ತೊಂದು ದೃಷ್ಟಿಕೋನ ಕೊಡುತ್ತದೆ. ಅದು ಹೀಗೆನ್ನುತ್ತದೆ: ನಮ್ಮ ನಿಜವಾದ ಸ್ವರೂಪವು ಅಖಂಡ ಸಚ್ಚಿದಾನಂದವೇ ಆಗಿದ್ದರೂ, ಮಾಯೆಯ ಆವರಣಶಕ್ತಿ ಮತ್ತು ವಿಕ್ಷೇಪಶಕ್ತಿಯಿಂದಾಗಿ ಶರೀರ-ಮನಸ್ಸುಗಳೊಡನೆ ಗುರುತಿಸಿಕೊಂಡುಬಿಡುತ್ತೇವೆ. ಮನಸ್ಸು ನಿಷ್ಕಲ್ಮಷವಾಗಿ, ನಿರಂಜನವಾಗಿ, ಶುದ್ಧವಾಗಿದ್ದಾಗ ಅದರಲ್ಲಿ ಬ್ರಹ್ಮಾನಂದವು ಪ್ರತಿಬಿಂಬಿಸುತ್ತದೆ. ಸಾಮಾನ್ಯವಾಗಿ ಮನಸ್ಸಿನಲ್ಲಿ ಕಾಮನೆಗಳು ಉಂಟಾದಾಗ ಮನಸ್ಸು ಚಂಚಲವಾಗಿ ಆ ಬಯಕೆಗಳನ್ನು ಪೂರೈಸಿಕೊಳ್ಳಲು ಹಾತೊರೆಯುತ್ತದೆ, ತಳಮಳಗೊಳ್ಳುತ್ತದೆ. ಬಯಕೆ ಈಡೇರಿದಂತೆ ಈ ತಳಮಳವು ಶಾಂತವಾಗುವುದು. ವಾಸ್ತವವಾಗಿ, ಆ ಕ್ಷಣದಲ್ಲಿ ಮನಸ್ಸು ಶಾಂತವಾದ ಕಾರಣ, ನಮ್ಮ ನೈಜಸ್ವರೂಪವಾದ ನಿಷ್ಕಲ್ಮಷ-ಇಂದ್ರಿಯಾತೀತ ಆನಂದವು ವ್ಯಕ್ತವಾಗುವುದು. ಆದರೆ ಅದು ನಮಗೆ 'ಬಯಕೆ ಈಡೇರಿದ್ದಕ್ಕೆ ಆದ ಆನಂದ' ಎಂಬ ಭಾಸವುಂಟಾಗುವುದೆಂದು ತಿಳಿಸುತ್ತದೆ.

### ಉಪಸಂಹಾರ

ಪರಬ್ರಹ್ಮನ ಅಸ್ತಿತ್ವವು ಪ್ರತಿಯೊಂದು ಜೀವಿಯಲ್ಲಿ ಪ್ರತ್ಯಗಾತ್ಮನ ರೂಪದಲ್ಲಿ ಇರುತ್ತದೆ. ಅದನ್ನೇ ಅಧ್ಯಾತ್ಮವೆಂದು ಕರೆದಿದ್ದಾರೆ. ಆ ಪರಬ್ರಹ್ಮನ ಸ್ವರೂಪವು - ಸತ್ ಎಂದರೆ ಅಸ್ತಿತ್ವ ಅಥವಾ ಇರುವಿಕೆ, ಚಿತ್ ಎಂದರೆ ಜ್ಞಾನಸ್ವರೂಪ ಮತ್ತು ಅನಂತ - ಆನಂದವಾಗಿದೆ. ಅನಂತವಾದ ಅಸೀಮವಾದ ಶಾಶ್ವತವಾದ ನಿರ್ವಿಕಾರವಾದ ಸ್ವಸ್ವರೂಪಾನಂದವೇ ಅಧ್ಯಾತ್ಮದ ನೆಲೆಯಲ್ಲಿ ನಿಂತಾಗ ವೇದ್ಯವಾಗುವುದು. ಹಾಗಾಗಿ ಅಧ್ಯಾತ್ಮ ಮಾರ್ಗವನ್ನು ಅನುಸರಿಸುವವರು ಅನಂತ-ಅಖಂಡ-ಬ್ರಹ್ಮಾನಂದದ ಪಥವನ್ನೇ ಅನುಸರಿಸುತ್ತಾರೆ.

**ಬ್ರಹ್ಮವಿದಾಪ್ನೋತಿ ಪರಮ್ । ತದೇಷಾಭ್ಯುಕ್ತಾ । ಸತ್ಯಂ ಜ್ಞಾನಮನಂತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತೇತಿ ॥** *(ತೈತ್ತಿರೀಯೋಪನಿಷತ್ತು ೨.೧.೧)*

'ಯಾರು ಹೃದಯದ ಗುಹೆಯಲ್ಲಿನ ಪರಮಾಕಾಶದಲ್ಲಿರುವ ಪ್ರತ್ಯಗಾತ್ಮನನ್ನು ಅನಂತವೂ, ಸತ್ಯವೂ, ಜ್ಞಸ್ವರೂಪವೂ ಆದ ಪರಬ್ರಹ್ಮವೆಂದು ಅರಿಯುತ್ತಾನೊ ಅವನಿಗೆ ಎಲ್ಲಾ ಕಾಮನೆಗಳೂ ಒಮ್ಮೆಲೆ ಕೈಗೂಡಿದ ಅನುಭವವಾಗುತ್ತದೆ. ಆ ಬ್ರಹ್ಮಜ್ಞಾನಿಯು ಅತ್ಯುತ್ಕೃಷ್ಟವಾದುದನ್ನೇ ಪಡೆಯುವನು.' ❀